**<u>ಸಿವಿಲ್ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹರಪನಹಳ್ಳಿ,</u>**
**ಸಿ.ಸಿ. ಸಂಖ್ಯೆ:2258/2023.**

**ಪಿರ್ಯಾದುದಾರ - ಸರ್ಕಾರದ ಪರವಾಗಿ ಅರಸಿಕೇರೆ ಪೊಲೀಸ್ ಠಾಣೆ.**

**ವಿರುದ್ಧ**

**ಆರೋಪಿತರು** ಆ-2 ನಿಂಗಪ್ಪ ಹೆಚ್ ಅಲಿಯಾಸ್ ಹಲಿಯಪ್ಪಲ ನಿಂಗಪ್ಪ ತಂದೆ ಕೆಂಚಪ್ಪ, ವಃ 42 ವರ್ಷ, ವಾಸಃ ಅರಸಿಕೇರೆ ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ,

ಆ-3 ದುರುಗೇಶ ತಂದೆ ಹನುಮಂತಪ್ಪ ವಃ 32 ವರ್ಷ, ವಾಸಃ ಅಂಬೇಡ್ಕರ್ ಬಡಾವಣೆ, ಹರಪನಹಳ್ಳಿ ನಗರ ಹಾಗೂ ತಾಲ್ಲೂಕು, ವಿಜಯನಗರ ಜಿಲ್ಲೆ

## <u>ಆಪಾದನೆ</u>

**ಶ್ರೀ ಮನು ಶರ್ಮ ಎಸ್.ಪಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹರಪನಹಳ್ಳಿ ಆದ ನಾನು ಆರೋಪಿತರಾದ ನಿಮಗೆ ಈ ಕೆಳಗಿನ ರೀತಿ ಆಪಾದನೆಯನ್ನು ರಚಿಸುತ್ತಿದ್ದೇನೆ.**

ದಿನಾಂಕಃ 08.12.2023 ರಂದು ರಾತ್ರಿ 12.00 ಗಂಟೆ ಸಮಯದಲ್ಲಿ ಅರಸಿಕೇರೆ ಪೋಲಿಸ್ ಠಾಣಾ ಸರಹದ್ದಿನ ಅರಸಿಕೇರೆ ಗ್ರಾಮದ, ಬಸ್ ನಿಲ್ದಾಣದ ಮುಂದೆ ಸಾರ್ವಜನಿಕ ಸ್ಥಳದಲ್ಲಿ 1 ನೇ ಆರೋಪಿತನು ಜನರನ್ನು ಉದ್ದೇಶಿಸಿ ಬನ್ನಿ ಇದು ಬಾಂಬೆ ಮಟಕಾ ಜೂಜಾಟ, ನಿಮ್ಮ ಆದೃಷ್ಟದ ನಂಬರ್ ಬರೆಯಿಸಿ, ನೀವು ಬರೆಯಿಸಿದ ನಂಬರ್ ಪಾಸಾದರೆ 1 ರೂಪಾಯಿಗೆ 80 ರೂಪಾಯಿ ಕೊಡುತ್ತೇನೆ ಅಂತಾ ಕೂಗೂತ್ತಾ ಜನರನ್ನು ಕರೆಯುತ್ತಾ ಜನರಿಂದ ಹಣವನ್ನು ಪಣವಾಗಿ ಕಟ್ಟಿಸಿಕೊಂಡು ಮಟ್ಕಾ ನಂಬರ್ ಜೂಜಾಟವನ್ನು ಅಡಿದ್ದು. ಆ ಕಾಲಕ್ಕೆ ಪೋಲಿಸರು ದಾಳಿ ಮಾಡಿ ಆತನನ್ನು ಹಿಡಿದು ವಿಚಾರಿಸಿದಾಗ ಆತನು ಹಣ ಮತ್ತು ಮಟಕಾ ಪಟ್ಟಿಯನ್ನು 2 ನೇ ಆರೋಪಿಯಾದ ನಿಮಗೆ ನೀಡುವುದಾಗಿ ಹೇಳಿದ್ದು, 2 ನೇ ಆರೋಪಿಯಾದ ನೀವು ಹಣ ಮತ್ತು ಮಟಕಾ ಚೀಟಿಯನ್ನು 3 ನೇ ಆರೋಪಿಯಾದ ನಿಮಗೆ ನೀಡುತ್ತಿದ್ದು. ಆ ಪ್ರಕಾರ 2 ಹಾಗೂ 3 ನೇ ಆರೋಪಿತರಾದ ನೀವು ಕರ್ನಾಟಕ ಪೋಲಿಸ್ ಅಧಿನಿಯಮ ಕಲಂ 78 (3) ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಪ್ರಃ ನಿಮಗೆ ಮೇಲಿನ ಆಪಾದನೆಯನ್ನು ಓದಿ ತಿಳಿಸಿ ಹೇಳಿದ್ದು ತಿಳಿಯಿತೆ?

ಉತ್ತರಃ ಆ-2

ಆ-3

ಪ್ರಃ ನೀವು ಮೇಲಿನ ಆಪಾದನೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ಆ-2

ಆ-3

**(ಮೇಲಿನ ಆಪಾದನೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಅವರು ಉತ್ತರಿಸಿದ ಭಾಷೆಯಲ್ಲಿ ಯಥಾವತ್ತಾಗಿ ಬರೆಯಲಾಯಿತು ಎಂದು ದೃಢೀಕರಿಸಿದೆ.)**

**ದಿನಾಂಕಃ** 03-04-2025.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ..ದಂ. ಹರಪನಹಳ್ಳಿ.